
ಇಂಗ್ಲಿಷ್ ಮೂಲ : ಆಸ್ಕರ್ ವೈಲ್ಡ್
**ಕನ್ನಡಕ್ಕೆ : ಟಿ.ಎಸ್. ರಘುನಾಥ್**

# ಮಾಡೆಲ್ ಲಕ್ಷಾಧೀಶ



ಶ್ರೀಮಂತಿಕೆ ಒಬ್ಬನಲ್ಲಿ ಇಲ್ಲವೆಂದರೆ, ಆಕರ್ಷಕ ವ್ಯಕ್ತಿಯಾಗಿರುವುದರಿಂದ ಏನೂ ಪ್ರಯೋಜನವಿಲ್ಲ. ಸಾಹಸಕ್ಕೆ ಕೈಹಾಕುವುದು ಉಳ್ಳವನ ಸವಲತ್ತು; ಆದರೆ ನಿರುದ್ಯೋಗಿಯ ವೃತ್ತಿಯಾಗಲಾರದು. ಬಡವನಾದವನು ಕಾರ್ಯಾನುಷ್ಠಾನಕ್ಕೆ ಬದ್ಧನಾಗಿರಬೇಕು ಹಾಗೂ ಶುಷ್ಕನಾಗಿರಬೇಕು. ಆಕರ್ಷಕನಾಗುವುದಕ್ಕಿಂತ ನಿಶ್ಚಿತ ಆದಾಯವನ್ನು ಹೊಂದುವುದು ಒಳ್ಳೆಯದು. ಈ ಮಾತುಗಳು ಹಗೀ ಎರ್ಸ್‌ಕೈನ್ ಎಂದೆಂದೂ ಆಧುನಿಕ ಬದುಕಿನ ಬಗ್ಗೆ ಅರ್ಥಮಾಡಿಕೊಳ್ಳದೇ ಇರುವ ದೊಡ್ಡ ಸತ್ಯಗಳು. ಆ ಬಡಪ್ರಾಣಿ! ಬೌದ್ಧಿಕವಾಗಿ ಕೂಡ ಆತನೇನು ಮಹತ್ವದವನಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಬೇಕು. ಆತ ಎಂದೂ, ಅವನ ಜೀವನದಲ್ಲಿ ಜಾಣ್ಮೆಯಿಂದ ವರ್ತಿಸಿದ್ದಾಗಲೀ, ಕೊನೆಗೆ ಕೆಟ್ಟದ್ದನ್ನು ಹೇಳಿದ್ದಾಗಲೀ ಇಲ್ಲ. ಆದರೆ ಅವನು ಗರಿಗರಿಯಾದ ಕಂದು ಬಣ್ಣದ ಕೂದಲಿನಿಂದ, ಮಾಟವಾದ ದೈಹಿಕ ಲಕ್ಷಣ ಹಾಗೂ ಕಂದು ಬಣ್ಣದ ಕಣ್ಣುಗಳಿಂದ ತುಂಬಾ ಆಕರ್ಷಣೀಯವಾಗಿದ್ದನು. ಅವನು ಗಂಡಸರ ಜೊತೆ ಎಷ್ಟು ಜನಪ್ರಿಯನೋ ಹೆಂಗಸರ ಜೊತೆಯೂ ಅಷ್ಟೇ. ಅವನು ಹಣ ಮಾಡುವುದುನ್ನು ಹೊರತುಪಡಿಸಿ ಬೇರೆಲ್ಲ ಸಾಮರ್ಥ್ಯವನ್ನು ಹೊಂದಿದ್ದನು. ಅವನ ತಂದೆ ಆತನಿಗೆ